**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 673/2017**

**ಚಾಸಾ :- 05 / ಪ್ರಾಸಾ :- 04**

| | |
|---|---|
| ಹೆಸರು | **ಲೋಕೇಶ್** |
| ತಂದೆಯ ಹೆಸರು | ಕೆಂಪಯ್ಯ |
| ವಯಸ್ಸು | **45** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಜಿಟ್ಟಿ ಪಾಳ್ಯ** |

**ದಿನಾಂಕ:13-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. 2016 ನೇ ಇಸವಿಯಲ್ಲಿ ಲಕುಪ್ಪೆ ಬಳಿ ಟಾಟ ಇಂಡಿಕಾ ಮತ್ತು ಪಲ್ಸರ್ ಬೈಕ್ ನಡುವೆ ಅಪಘಾತ ಆಗಿರುತ್ತದೆ, ಆ ಸಮಯದಲ್ಲಿ ನಾನು ಅಲ್ಲಿ ಹೋಗುತ್ತಿದ್ದಾಗ, ಪೋಲೀಸರು ಮಹಜರ್ ಗೆ ಬರುವಂತೆ ತಿಳಿಸಿದರು. ನನ್ನ ಜೊತೆ ನಿಪಿ-2 ಕ್ಕೆ ಚಾಸಾ-6 ರವರು ಸಹಿಯನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಈ ಮೇಲೆ ಹೇಳಿರುವ ಎರಡು ವಾಹನಗಳನ್ನು ವಶಪಡಿಸಿಕೊಂಡರು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಖಿವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.10-10-2016 ರಂದು ಬೆಳಗ್ಗೆ 8 ರಿಂದ 8.40 ರ ಸಮಯದಲ್ಲಿ ಫ್ರಾಸಾ-2 ರವರು ತೋರಿಸಿದ ಜಾಗದಲ್ಲಿ ಪೋಲೀಸರು ನಿಮ್ಮ, ಫ್ರಾಸಾ-2 ಮತ್ತು ಚಾಸಾ-6 ರವರ ಸಮಕ್ಷಮದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆ ಮಾಡುವ ಸಮಯದಲ್ಲಿ ಪೋಲೀಸರು ಟಾಟ ಇಂಡಿಕಾ ಕಾರ್ ಸಂ. ಕೆಎ-53-ಬಿ-2774 ಮತ್ತು ಪಲ್ಸರ್ ಬೈಕ್ ಸಂ. ಕೆಎ-41-ಇಇ-4638 ವಾಹನಗಳನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಪ್ರಕರಣವು ನಡೆದು ಸುಮಾರು 7 ವರ್ಷಗಳು ಆಗಿರುವ ಕಾರಣದಿಂದ ನೀವು ದಿನಾಂಕ ಮತ್ತು ವಾಹನಗಳ ಸಂಖ್ಯೆಯನ್ನು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಲು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲು :- ಆರೋಪಿಯ ಪರ ಶ್ರೀ. ಎ. ಎಸ್.ಎಸ್, ವಕೀಲರಿಂದ :-**

ನೀವು, ಫ್ರಾಸಾ-2 ಮತ್ತು ಚಾಸಾ-6 ರವರು ಒಂದೇ ಊರಿನವರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಜಟ್ಟಿಪಾಳ್ಯದಿಂದ ಅಪಘಾತ ನಡೆದ ಸ್ಥಳಕ್ಕೆ ಸುಮಾರು ಒಂದುವರೆ ಕಿ.ಮೀ ನಷ್ಟು ಅಂತರವಿದೆ. ನಿಮಗೆ ಅಪಘಾತದ ಬಗ್ಗೆ ಫ್ರಾಸಾ-2 ರವರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಗೆ ಸಹಕರಿಸುವಂತೆ ಪೋಲೀಸರು ನಿಮಗೆ ತಿಳಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಮತ್ತು ಚಾಸಾ-6 ರವರು ನಡೆದುಕೊಂಡುಹೋಗುತ್ತಿದ್ದಾಗ, ಫ್ರಾಸಾ-2 ರವರು ನಿಪಿ-2 ಕ್ಕೆ ಸಹಿ ಮಾಡಲು ಹೇಳಿದ ಕಾರಣ ಫ್ರಾಸಾ-2 ರವರು ನಿಮ್ಮ ಊರಿನವರು ಆದ ಕಾರಣ ನೀವು ನಿಪಿ-2 ಕ್ಕೆ ಸಹಿಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷ್ಮಿ ಹೌದು ಎನ್ನುತ್ತಾರೆ. ನಿಮಗೆ ನಿಪಿ-2 ರಲ್ಲಿ ಇರುವ ವಿಷಯದ ಬಗ್ಗೆ ಸಂಪೂರ್ಣವಾಗಿ ಮಾಹಿತಿ ಇರುವುದಿಲ್ಲ

ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಕಚ್ಚಾನಕ್ಷೆಯನ್ನು ತಯಾರು ಮಾಡಿರುವುದಿಲ್ಲ ಮತ್ತು ಈ ಮೇಲೆ ಹೇಳಿರುವ ವಾಹನಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮಗೆ ನಿಪಿ-2 ರಲ್ಲಿ ಇರುವ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲದೇ ಇದ್ದರೂ ಸಹ ಪ್ರಾಸಾ-2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ನಿಮ್ಮ ಸಹಿಯನ್ನು ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ  ನ್ಯಾಯಾಲಯ , ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ  673/2017**

**ಚಾಸಾ ಃ- 21  /  ಪ್ರಾಸಾ ಃ- 5**

| | |
|---|---|
| ಹೆಸರು | **ರಾಜೇಗೌಡ** |
| ತಂದೆಯ  ಹೆಸರು | **ಲೇಟ್ ಚನ್ನೆಗೌಡ** |
| ವಯಸ್ಸು | **62** |
| ಉದ್ಯೋಗ | **ನಿವೃತ್ತ ಎಎಸ್‌ಐ** |
| ವಿಳಾಸ | **ವಾಜರಹಳ್ಳಿ** |

**ದಿನಾಂಕಃ13-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ನಾನು ದಿ.01-08-2016  ರಿಂದ ದಿ.31-05-2022 ವರೆಗೆ  ತಾವರೆಕೆರೆ ಪೋಲೀಸ್ ಠಾಣೆಯಲ್ಲಿ  ಮುಖ್ಯ ಪೇದೆ ಮತ್ತು ಎ.ಎಸ್.ಐ ಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ.10-10-2016 ರಂದು ಬೆಳಗ್ಗೆ 1.00 ಗಂಟೆಯ  ಸಮಯದಲ್ಲಿ ಪಿರ್ಯಾದುದಾರರು  ಠಾಣೆಗೆ ಹಾಜರಾಗಿ  ದೂರನ್ನು ನೀಡಿದ ಮೇರೆಗೆ ಠಾಣಾ ಮೊಕದ್ದಮೆ ನಂ.360/2016 ಎಂದು ನಮೂದಿಸಲಾಯಿತು. ಸದರಿ ಮೊಕದ್ದಮೆ ನಂ. ಕಲಂ 279, 337 ಮತ್ತು 304-ಎ  ಐಪಿಸಿ ಯ ರೀತ್ಯ ಪ್ರಕರಣ ದಾಖಲು ಮಾಡಲಾಯಿತು. ಈಗ  ಸಾಕ್ಷಿಗೆ ನಿಪಿ-1 ನ್ನು  ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು  ಗುರುತಿಸಲಾಯಿತು. ಸದರಿ ದೂರಿನ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ಮಾಡಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-7 ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಅದೇ ದಿನದಂದು ಬೆಳಿಗ್ಗೆ 8.00 ರಿಂದ 8.40 ಗಂಟೆವರೆಗೆ ಪ್ರಾಸಾ-2 ರವರು ತೋರಿಸಿದ ಜಾಗದಲ್ಲಿ ನಿಪಿ-2 ರಂತೆ ಪಂಚನಾಮೆಯನ್ನು ಪ್ರಾಸಾ-2, 4 ಮತ್ತು ಚಾಸಾ-6 ರವರ ಸಮಕ್ಷಮದಲ್ಲಿ ಮಾಡಲಾಯಿತು. ಈಗ ಸಾಕ್ಷಿಗೆ ನಿಪಿ-02 ಅನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಟಾಟ ಇಂಡಿಕಾ ಕಾರ್ ಸಂ. ಕೆಎ-53-ಬಿ-2774 ಮತ್ತು ಪಲ್ಸರ್ ಬೈಕ್ ಸಂ. ಕೆಎ-41-ಇಇ-4638 ವಾಹನಗಳನ್ನು ವಶಪಡಿಸಿಕೊಂಡರು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಕಚ್ಚಾ ನಕ್ಷೆಯನ್ನು ತಯಾರು ಮಾಡಲಾಯಿತು. ಈಗ ಸಾಕ್ಷಿಗೆ ಕಚ್ಚಾ ನಕ್ಷೆಯನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಕಚ್ಚಾ ನಕ್ಷೆಯನ್ನು ನಿಪಿ-8 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಅಮಾನತ್ತು ಮಾಡಿಕೊಂಡ ವಾಹನಗಳನ್ನು ಠಾಣಾ ಮಾಲುಪಟ್ಟಿ ಸಂ.107/2016 ಎಂದು ನಮೂದಿಸಲಾಯಿತು. ಈಗ ಸಾಕ್ಷಿಗೆ ಮಾಲುಪಟ್ಟಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಮಾಲುಪಟ್ಟಿಯನ್ನು ನಿಪಿ-9 ಎಂದು ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ನಂತರ ಹೆಚ್ಚಿನ ತನಿಖೆಗೆ ಕಡತವನ್ನು ಚಾಸಾ-22 ರವರಿಗೆ ವರ್ಗಾವಣೆ ಮಾಡಲಾಯಿತು.

**ಪಾಟೀ ಸವಾಲು :- ಆರೋಪಿಯ ಪರ ಶ್ರೀ. ಎ.ಎಸ್.ಎಸ್, ವಕೀಲರಿಂದ :-**

**1.**ಮೃತ ವ್ಯಕ್ತಿಯ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ನೀವು ಪ್ರಾಸಾ-2 ರವರಿಂದ ಸುಳ್ಳು ದೂರನ್ನು ಸ್ವೀಕರಿಸಿ ನಿಪಿ-7 ರಂತೆ ಸುಳ್ಳು ಎಫ್.ಐ. ಆರ್ ನ್ನು ಹಾಕಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-2 ನ್ನು ಯಾರು ಬರೆದಿದ್ದಾರೆ ಎಂದು ಅದರಲ್ಲಿ ನಮೂದಿಸಿರುವುದಿಲ್ಲ ಎಂದರೆ

ಸಾಕ್ಷಿಯು ಹೌದು ಎನ್ನುತ್ತಾರೆ. ಪ್ರಾಸಾ-4 ಮತ್ತು ಚಾಸಾ-6 ರವರಿಗೆ ಪಂಚನಾಮೆಗೆ ಸಹಕರಿಸುವಂತೆ ಹೇಳಿ ನಾನು ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ನಿಪಿ-2 ನ್ನು ನೀವು ಠಾಣೆಯಲ್ಲಿಯೇ ತಯಾರು ಮಾಡಿರುತ್ತೀರಾ ಮತ್ತು ಪ್ರಾಸಾ-2 ರವರು ಪ್ರಾಸಾ-4 ಮತ್ತು ಚಾಸಾ-6 ರವರನ್ನು ಠಾಣೆಗೆ ಕರೆದುಕೊಂಡು ಬಂದು ನಿಪಿ-2 ಕ್ಕೆ ಸಹಿಯನ್ನು ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

2. ಅಪಘಾತ ನಡೆದ ಸ್ಥಳದಲ್ಲಿ ಸಾಕಷ್ಟು ವಾಹನಗಳ ಸಂಚಾರ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಆಗಾಗಿ ಪಂಚನಾಮೆ ಮಾಡುವ ಸಮಯದಲ್ಲಿ ರಸ್ತೆಯ ಮೇಲೆ ಯಾವುದೇ ಗುರುತು ಇರುವುದಿಲ್ಲ ಎಂದರೆ ಸಾಕ್ಷ್ಮಿಯು ರಕ್ತದ ಕಲೆಗಳು, ಗಾಜಿನ ಚೂರು ಮತ್ತು ವಾಹನದ ಚಕ್ರಗಳ ಗುರುತುಗಳ ಆಧಾರದ ಮೇಲೆ ನಿಪಿ-8 ರಂತೆ ನಕ್ಷೆಯನ್ನು ಮಾಡಿರುತ್ತೇವೆ. ನಿಪಿ-8 ಕ್ಕೆ ಅನುಗುಣವಾಗಿ ನೀವು ಫೋಟೋ ಅಥವಾ ಇತರೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ತನಗೆ ನೆನಪಿಲ್ಲ ಎನ್ನುತ್ತಾರೆ. ಮೃತ ವ್ಯಕ್ತಿಯ ಕುಟುಂಬದವರಿಗೆ ಸಹಾಯವನ್ನು ಮಾಡುವ ಸಲುವಾಗಿ ನೀವು ಆರೋಪಿಯ ಮೇಲೆ ಆರೋಪವನ್ನು ಬರುವ ರೀತಿಯಲ್ಲಿ ನಿಪಿ-8 ರಂತೆ ನಕ್ಷೆಯನ್ನು ತಯಾರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-2, 7 ರಿಂದ 9 ನ್ನು ನೀವು ಠಾಣೆಯಲ್ಲಿಯೇ ತಯಾರು ಮಾಡಿ ಮೃತವ್ಯಕ್ತಿಯ ಕುಟುಂಬಕ್ಕೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**